# ಕನ್ನಡಕ್ಕೆ ಬಲ ತುಂಬುವ ಬಗೆ

ಮನುಷ್ಯರ ಮಾತು ಆರು ಸಾವಿರ ಭಾಷೆಗಳಲ್ಲಿ ಹರಡಿಹೋಗಿದೆ. ಭಾರತದಲ್ಲೇ ಆರು ಭಾಷಾ ಕುಟುಂಬಗಳಿಗೆ ಸೇರಿದ ಮೂರು ಸಾವಿರ ಭಾಷೆಗಳಿವೆಯಂತೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಅಸ್ಮಿತೆಯ ಹೆಗ್ಗುರುತಾದ ಭಾಷೆ, ಯುಗಧರ್ಮ ಪ್ರೇರಿತ ಆತಂಕಗಳನ್ನು ಎದುರಿಸುತ್ತಲೇ ಇದೆ. ಈಗೀಗ ಜಾಗತೀಕರಣವೂ ಸೇರಿ ಹಲವು ಬಗೆಯ ಬಿರುಗಾಳಿಗಳಿಗೆ ಮುಖಾಮುಖಿಯಾಗಿದೆ.

ಭಾರತ ಬಹುಸಂಸ್ಕೃತಿಯ ದೇಶವೆನ್ನುವುದು ಎಷ್ಟು ಮುಖ್ಯವೋ ಬಹುಭಾಷೆಯ ದೇಶವೆನ್ನುವುದೂ ಅಷ್ಟೇ ಮುಖ್ಯ. ಇತಿಹಾಸದುದ್ದಕ್ಕೂ ರಾಜಕೀಯ ಮತ್ತು ಸಾಮಾಜಿಕ ಶ್ರೇಣೀಕರಣದಲ್ಲಿ, ಸ್ಥಿತ್ಯಂತರಗಳಲ್ಲಿ ಭಾಷೆಯೂ ಒಂದು ಪ್ರಬಲ ಅಸ್ತ್ರವಾಗಿದೆ. ವಸಾಹತೀಕರಣ ನಮಗೆ ಹೊಸ ರೂಪದ ಶಿಕ್ಷಣದ ಜೊತೆಗೆ ಕಲಿಕಾಭಾಷೆಯ ಹೊಸ ಬಿಕ್ಕಟ್ಟುಗಳನ್ನು ಗಂಟುಹಾಕಿತು. ಈಗ ಯಾವುದನ್ನೂ ಬಿಡದ ಜಾಗತೀಕರಣ ಭಾಷೆಯನ್ನು ತಾನೇ ಏಕೆ ಬಿಟ್ಟೀತು?

ಭಾಷೆ ಈಗ ಜ್ಞಾನದ ಮೂಲವಾಗಬೇಕೋ ಮಾಹಿತಿಯ ಮಾಧ್ಯಮವಾಗಬೇಕೋ ಅಥವಾ ಈಗ ಜಾಗತೀಕರಣದ ಮಂತ್ರವಾಗಿರುವ ಮಾನವ ಸಂಪನ್ಮೂಲ ಅಭಿವೃದ್ಧಿಯ ಒಂದು ಕೌಶಲವಾಗಬೇಕೋ? ಇವೆಲ್ಲಕ್ಕೂ ಅಡಿಪಾಯವಾದ 'ಶಾಲಾ ಶಿಕ್ಷಣದ ಮಾಧ್ಯಮ' ಯಾವ ಭಾಷೆ ಆಗಿರಬೇಕು? ಮಾತೃಭಾಷೆ, ದೇಶಭಾಷೆ, ಜನಭಾಷೆ, ಪ್ರಾದೇಶಿಕ ಭಾಷೆ, ರಾಷ್ಟ್ರಭಾಷೆ, ಅಂತರರಾಷ್ಟ್ರೀಯ ಭಾಷೆ ಇವುಗಳಲ್ಲಿ ಯಾವುದು ಶಾಲಾ ಶಿಕ್ಷಣಕ್ಕೆ ಸೂಕ್ತ ಮತ್ತು ಇದನ್ನು ಪಾಲಕರು ತೀರ್ಮಾನಿಸುವುದೇ ಅಥವಾ ಸರ್ಕಾರ– ನ್ಯಾಯಾಲಯ ನಿರ್ಧರಿವುದೇ ಅನ್ನುವ ವಿಷಯಗಳಲ್ಲಿನ ಗೊಂದಲ ಇದೀಗ ತಾರಕಕ್ಕೇರಿದೆ.

ಕನ್ನಡ ಅಥವಾ ಯಾವುದೇ ದೇಶಭಾಷೆಯ ಭವಿಷ್ಯವನ್ನು ಕುರಿತ ಚಿಂತನೆ ಮುಚ್ಚಿದ ದಾರಿಯೇನಲ್ಲ. ಪರಿಹಾರಗಳು ಇದ್ದೇ ಇವೆ. ಮರೆತಂತಾಗಿರುವ ಕರ್ನಾಟಕ ಸರ್ಕಾರದ ಶಿಕ್ಷಣ ಕಾಯ್ದೆಯಿಂದ ಕನ್ನಡಕ್ಕೆ ಹೊಸ ಬಲ ತುಂಬುವುದು, ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಕನ್ನಡಕ್ಕೆ ಅಗತ್ಯ ಸ್ಥಾನ ನೀಡುವುದು, ಕನ್ನಡ ಮಾಧ್ಯಮದಲ್ಲಿ ಕಲಿತ ಮಕ್ಕಳಿಗೆ ವೃತ್ತಿಪರ ಶಿಕ್ಷಣದಲ್ಲಿ ಆದ್ಯತೆ ನೀಡುವುದು ಮೊದಲಾದ ಸಲಹೆಗಳನ್ನು ಪ್ರಾಜ್ಞರು ಮುಂದಿಟ್ಟಿದ್ದಾರೆ. ಹೀಗೆ ಕನ್ನಡ ಭಾಷೆಯ 'ಸಾಮಾಜಿಕ ಸಬಲೀಕರಣ' ಮಾಡಲು ಈಗ ಬಹಳ ಮುಖ್ಯವಾಗಿ ಬೇಕಾಗಿರುವುದು ರಾಜಕೀಯ ಇಚ್ಛಾಶಕ್ತಿ.



**– ಆರ್. ಪೂರ್ಣಿಮಾ**